# 73ನೇ ಸಂವಿಧಾನ ತಿದ್ದುಪಡಿಯ 25ನೇ ವರ್ಷಾಚರಣೆ

*ಸ್ಥಳೀಯಾಡಳಿತ ಸಂಸ್ಥೆಗಳಿಗೆ ಅತ್ಯಂತ ಮಹತ್ವವಾದಂತಹ ಸಂವಿಧಾನದ 73ನೇ ತಿದ್ದುಪಡಿಯಾಗಿ ಈಗ 25ರ ಕಾಲಘಟ್ಟ. ಈ ಸಂದರ್ಭದಲ್ಲಿ ಉಡುಪಿ ಜಿಲ್ಲೆಯಲ್ಲಿ ದಿನಾಂಕ 23, 24ನೇ ಫೆಬ್ರವರಿ, 2018ರಂದು 'ಗ್ರಾಮ ಸ್ವರಾಜ್ ಚಿಂತನ-ಮಂಥನ' ಕಾರ್ಯಕ್ರಮ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ವಿಷಯಗಳಿಗೆ ಸದಾ ಹೆಚ್ಚಿನ ಒತ್ತು ನೀಡುತ್ತಿರುವ ಮಾಧ್ಯಮವಾಗಿ ಕೆಲಸ ಮಾಡುತ್ತಿರುವ ನಮ್ಮ ಜನಪ್ರತಿನಿಧಿ ಪತ್ರಿಕೆಯಿಂದ ಸ್ಥಳೀಯಾಡಳಿತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ವಿಶೇಷ ಲೇಖನಮಾಲೆಗಳನ್ನು ಹೆಚ್ಚುವರಿ ಪುಟಗಳಾಗಿ ಇದರೊಂದಿಗೆ ನೀಡಲಾಗುತ್ತಿದೆ. - ಸಂ*

# ಗ್ರಾಮ ಸ್ವರಾಜ್ಯದ ಸ್ಥಾಪನೆಗೆ 25 ಮೆಟ್ಟಿಲುಗಳು

**ಪ್ರಸ್ತುತಿ : ಕೃಪಾ ಎಂ.ಎಂ.**
ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ಸಂಯೋಜಕರು ಹಾಗೂ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ ಕಾರ್ಯಕರ್ತರು.

**1. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993**
* ಸಂವಿಧಾನದ 73ನೇ ತಿದ್ದುಪಡಿ ಕಾಯಿದೆಯ ಆಶಯದಂತೆ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿ ಸಮಿತಿಯ ವರದಿ - ಗ್ರಾಮ ಸ್ವರಾಜ್ಯಕ್ಕೆ ಪಥ
* ಈ ವರದಿಯ ಶಿಫಾರಸ್ಸುಗಳಿಗೆ ಅನ್ವಯವಾಗಿ ಅಧಿನಿಯಮ ಸಂಖ್ಯೆ 44ರಂತೆ ಕಾಯಿದೆ ತಿದ್ದುಪಡಿ
* ದಿನಾಂಕ 26-27, ನವೆಂಬರ್ 2015 ಮಸೂದೆಯ ಅಂಗೀಕಾರ
* ಡಿಸೆಂಬರ್ 18, 2015 ರಾಜ್ಯಪಾಲರ ಅಂಕಿತ
* 25-02-2016 ರಿಂದ ಕಾಯಿದೆಯಾಗಿ ಜಾರಿ

**2. 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993'** ಎಂಬ ನಾಮಕರಣ.
* ವಿಕೇಂದ್ರೀಕರಣಕ್ಕೆ ಹಾಗೂ ಪಂಚಾಯತ್ ಸ್ವಾಯತ್ತತೆಯತ್ತ ರಾಜಕೀಯ ಇಚ್ಛಾಶಕ್ತಿ
* ಉದ್ದೇಶಿತ ಹೇಳಿಕೆ
* ಕಾಯ್ದೆಯ ಸ್ವರೂಪ ಮತ್ತು ದಿಕ್ಕುಗಳ ಸೂಚಕ
* ಪಂಚಾಯತ್ ಸಂಸ್ಥೆಗಳಲ್ಲಿ ಸ್ಥಳೀಯ ಸ್ವಯಂ-ಸರ್ಕಾರದ ತತ್ವಗಳು

**3. ವ್ಯಾಖ್ಯಾನಗಳು**
* ***ಜವಾಬ್ದಾರಿಗಳ ನಕ್ಷೆ:*** ಪಂಚಾಯತ್ ರಾಜ್ ಸಂಸ್ಥೆಗಳು ಈ ಅಧಿನಿಯಮದ ಅಡಿಯಲ್ಲಿ ಹೊಂದಿರಬಹುದಾದ ಜವಾಬ್ದಾರಿಗಳ ವಿವರವಾದ ಪಟ್ಟಿ
* ***ಸಮಾಜದ ಸುರಕ್ಷಿತವಲ್ಲದ (Vulnerable) ವರ್ಗಗಳು:***


> ಮಕ್ಕಳು, ಅಪ್ರಾಪ್ತ ವಯಸ್ಸಿನ ಮಕ್ಕಳು, ಮಹಿಳೆಯರು,
> ಹಿರಿಯ ನಾಗರಿಕರು,
> ರೋಗಗ್ರಸ್ಥರು ಮತ್ತು ಅಶಕ್ತರು,
> ಅಸಮರ್ಥರು ಮತ್ತು ವಿಕಲಚೇತನರು,
> ಅನುಸೂಚಿತ ಜಾತಿಗಳು ಮತ್ತು ಪಂಗಡಗಳು,
> ಸಮಾಜದ ಧಾರ್ಮಿಕ, ಭಾಷಾ ಮತ್ತು ಲೈಂಗಿಕ ಅಲ್ಪಸಂಖ್ಯಾತರು,
> ಜೀತ ಕಾರ್ಮಿಕರು ಯಾರಾದರೂ ಇದ್ದಲ್ಲಿ,
> ಅಲೆಮಾರಿಗಳು ಮತ್ತು ಬುಡಕಟ್ಟು ಸಮೂಹಗಳು ಹಾಗೂ ವಲಸೆ ಕಾರ್ಮಿಕರು.

**4. ಪೀಠಿಕೆ ಮತ್ತು ನಿರ್ದೇಶಕ ತತ್ವಗಳ ಸೇರ್ಪಡೆ**
* ಪಂಚಾಯತ್ ಕಾಯ್ದೆಗೆ ನಿರ್ದೇಶಕ ತತ್ವಗಳ ಸೇರ್ಪಡೆ - ಸಂವಿಧಾನದ 73ನೇ ತಿದ್ದುಪಡಿ ಕಾಯಿದೆಯ ಆಶಯಗಳ ಸಂಪನ್ನಗೊಳಿಸುವಿಕೆಗೆ ಬದ್ಧತೆಯ ಪುನರುಚ್ಚಾರ.
* ಗ್ರಾಮ ಸ್ವರಾಜ್ಯದ ಮೌಲ್ಯಗಳ ಸಾಕಾರಗೊಳಿಸುವಿಕೆ.

**5. 'ಜನವಸತಿ ಸಭೆ' - ಸ್ಥಳೀಯ ಸ್ವಯಂ-ಸರ್ಕಾರದ ಘಟಕ**
* ತಳಮಟ್ಟದಿಂದ ಪ್ರಜಾಪ್ರಭುತ್ವ ವ್ಯವಸ್ಥೆಯ ಸಬಲೀಕರಣ
* ದುರ್ಬಲರ ಧ್ವನಿಗೆ ಮಾನ್ಯತೆ
* ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವಿಕೆ
* ಸಮಾಜದ ಸುರಕ್ಷಿತವಲ್ಲದ ವರ್ಗಗಳ ಜನರು ತಮ್ಮ ಹಕ್ಕುಗಳನ್ನು ಚಲಾಯಿಸುವುದಕ್ಕೆ ಸುರಕ್ಷಿತ ಮತ್ತು ಹಿತಕರ ಪರಿಸರ ನಿರ್ಮಾಣ

**6. ಜನವಸತಿ ಸಭೆ, ವಾರ್ಡ್ ಸಭೆ ಮತ್ತು ಗ್ರಾಮ ಸಭೆಗೆ ಮಹತ್ವ**
* ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಪರಿಸರ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಯೋಜನೆಗಳ ಅನುಷ್ಠಾನಕ್ಕೆ ಆದ್ಯತೆಯ ನಿಗದಿ.
* ಜನವಸತಿ ಸಭಾ, ವಾರ್ಡ್ ಸಭಾ ಮತ್ತು ಗ್ರಾಮ ಸಭಾಗಳಿಗೆ ನಿರ್ದಿಷ್ಟ ಪ್ರಕಾರ್ಯಗಳು ಮತ್ತು ಅಧಿಕಾರಗಳ ಸ್ಪಷ್ಟನೆ
* ತಳಮಟ್ಟದ ಜನಭಾಗವಹಿಸುವಿಕೆಯ ಪ್ರಜಾಪ್ರಭುತ್ವಕ್ಕೆ ಪ್ರೋತ್ಸಾಹ
* ಜನ ಒಳಗೊಳ್ಳುವಿಕೆಯ ಅಭಿವೃದ್ಧಿಗೆ ಒತ್ತು

**7. ಗ್ರಾಮ ಸಭೆಗೆ ಎಲ್ಲಾ ಹಂತದ ಸರ್ಕಾರಗಳ ಬದ್ಧತೆ**
* 'ಗ್ರಾಮ ಸಭೆ' ಸ್ಥಳೀಯ ಸ್ವಯಂ-ಸರ್ಕಾರದ ಮೂಲ ಘಟಕ
* ಯೋಜನೆ, ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದಲ್ಲಿ ಗ್ರಾಮದ ಎಲ್ಲಾ ನಾಗರಿಕರ ನೇರ ಭಾಗವಹಿಸುವಿಕೆ




* ಗ್ರಾಮ ಸಭೆಯ ನಿರ್ಣಯವೇ ಅಂತಿಮ, ಎಲ್ಲಾ ಹಂತದ ಸರ್ಕಾರಗಳು ಅದಕ್ಕೆ ಉತ್ತರದಾಯಿಗಳು
* ಗ್ರಾಮ ಸಭೆಯ ಯೋಜನೆಗಳನ್ನು ಬದಲಾಯಿಸುವಂತಿಲ್ಲ

**8. ಪಾರದರ್ಶಕತೆಗೆ ಆದ್ಯತೆ ನೀಡಿ ನಿಬಂಧನೆಗಳು**
* ಚುನಾಯಿತ ಸದಸ್ಯರಿಂದ ಚರ ಮತ್ತು ಸ್ಥಿರ ಆಸ್ತಿಗಳ ಘೋಷಣೆ
* ಜನಭಾಗವಹಿಸುವಿಕೆಯಲ್ಲಿ ಯೋಜನೆ, ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ
* ಭಾಗವಹಿಸುವಿಕೆಯ ಗ್ರಾಮೀಣ ಪರಾಮರ್ಶೆ (ಅಪ್ರೇಸಲ್)
* ಸಾಧನಾ ನಿರ್ವಹಣಾ ವ್ಯವಸ್ಥೆ
* ಹಿಂದುಳಿದಿರುವ ಪ್ರದೇಶ, ತುರ್ತು ಅಗತ್ಯತೆ, ಪರಿಣಾಮ ಮತ್ತು ಅಶಕ್ಯತೆ - ಆಧರಿಸಿ ಆದ್ಯತಾ ಶ್ರೇಣಿಕರಣ

**9. ಸ್ಥಳೀಯ ಸ್ವಯಂ-ಸರ್ಕಾರಗಳಾಗಿ ಕಾರ್ಯನಿರ್ವಹಿಸಲು ಪೂರಕ ಅವಕಾಶಗಳು**
* ಅಗತ್ಯವಾದ ಅಧಿಕಾರ, ಪ್ರಾಧಿಕಾರ, ಪ್ರಕಾರ್ಯ, ಕಾರ್ಯನಿರ್ವಾಹಕರು ಮತ್ತು ನಿಧಿಗಳು ತ್ರಿಸ್ತರ ಪಂಚಾಯತ್‌ಗಳಿಗೆ ರಾಜ್ಯದಿಂದ ಪ್ರಧಾನ
* ರಾಜ್ಯ ಹಣಕಾಸು ಆಯೋಗವು ನಿರ್ಧರಿಸಬಹುದಾದ ಪಂಚಾಯತ್ ಅನುದಾನದಲ್ಲಿ 20%ಕ್ಕೆ ಕಡಿಮೆಯಿಲ್ಲದಂತೆ ಮುಕ್ತ ಅನುದಾನ
* ಪಂಚಾಯತ್ ಅಭಿವೃದ್ಧಿಗೆ ಪೂರಕವಾಗಿ ಗ್ರಾಮ ಪಂಚಾಯತ್‌ಗಳಿಗೆ ಅದರದ್ದೇ ಆದ ಉಪನಿಯಮ(ಬೈಲಾ)ಗಳನ್ನು ಮಾಡಿಕೊಳ್ಳುವ ಅಧಿಕಾರ
* ಆ ಪ್ರದೇಶಗಳ ಜನರ ಎಲ್ಲಾ ಅಧಿಕೃತ ಕೆಲಸ ಕಾರ್ಯಗಳಿಗಾಗಿ ಮುಂಚೂಣಿ ಕಾರ್ಯಾಲಯ

**10. ಬದಿಗೊತ್ತಲ್ಪಟ್ಟ/ಅಸುರಕ್ಷಿತ ವರ್ಗದ ಹಕ್ಕು ಮತ್ತು ಭಾಗವಹಿಸುವಿಕೆಗೆ ಪ್ರೋತ್ಸಾಹ**
* ಮಹಿಳೆಯರು ಮತ್ತು ಮಕ್ಕಳನ್ನು ಒಳಗೊಂಡ ಅಸುರಕ್ಷಿತ ವರ್ಗದವರ ಭಾಗವಹಿಸುವಿಕೆಗೆ, ಹಕ್ಕು ಚಲಾಯಿಸಲು ಭಯ-ಮುಕ್ತ ವಾತಾವರಣ ಸೃಷ್ಟಿ
* ಅಸುರಕ್ಷಿತ ವರ್ಗದ ಎಲ್ಲಾ ಗುಂಪುಗಳಿಗೆ ಅವರ ವಿಷಯಗಳನ್ನು ಚರ್ಚಿಸಲು ವರ್ಷಕ್ಕೆ ಕನಿಷ್ಠ ಒಂದು ಬಾರಿ ವಿಶೇಷ ಗ್ರಾಮ ಸಭೆ
* ಮಹಿಳೆಯರ ಮತ್ತು ಅಂಗವಿಕಲತೆ ಉಳ್ಳವರ ಸಬಲೀಕರಣ
* ಸಮುದಾಯದ ಸಾಮರಸ್ಯಕ್ಕೆ ಒತ್ತು
* ಪಂಚಾಯತ್‌ನ ಕರ್ತವ್ಯಗಳಲ್ಲಿ ಅಡಕ

> ಲೈಂಗಿಕ ಕಿರುಕುಳದ ನಿಯಂತ್ರಣ
> ಅಪಾಯಕಾರಿ ಕಲ್ಲುಗಣಿಗಾರಿಕೆ, ಕೊಳವೆಬಾವಿಗಳನ್ನು, ತೆರೆದಬಾವಿಗಳನ್ನು ತೋಡುವುದು ಮತ್ತು ಹೊಂಡಗಳ ನಿಯಂತ್ರಣ
> ಮದ್ಯ ಮತ್ತು ಮಾದಕ ವಸ್ತುಗಳ ನಿಯಂತ್ರಣ
> ಚುನಾವಣೆ ಕಾಲದಲ್ಲಿ ಭ್ರಷ್ಟಾಚಾರಗಳನ್ನು ತಡೆಗಟ್ಟುವುದು

**11. ಸಾಮುದಾಯಿಕ ಗುತ್ತಿಗೆಗಳು**
* ಪಂಚಾಯತ್ ವ್ಯಾಪ್ತಿಯಲ್ಲಿ ವಾಸವಾಗಿರುವ ಒಟ್ಟಾಗಿ ಬಂದಂತಹ ಜನರ ತಂಡ ಅಥವಾ ಸ್ವ-ಸಹಾಯ ಗುಂಪುಗಳಿಗೆ 20 ಲಕ್ಷದವರೆಗಿನ ಕಾಮಗಾರಿಗಳನ್ನು ನಡೆಸಲು ಮತ್ತು ಕೈಗೊಳ್ಳಲು ಒಪ್ಪಿಗೆ ನೀಡಲು ಪಂಚಾಯತ್‌ಗೆ ಅಧಿಕಾರ

**12. ಮುನ್ನೋಟ ಯೋಜನೆ ಮತ್ತು ಜವಾಬ್ದಾರಿ ನಕ್ಷೆ**
* ತ್ರಿಸ್ತರ ಪಂಚಾಯತ್‌ಗಳ ಕರ್ತವ್ಯ ಮತ್ತು ಜವಾಬ್ದಾರಿಗಳ ಸ್ಪಷ್ಟತೆಗಾಗಿ, ಕ್ರೋಢೀಕರಣದ ಖಚಿತತೆಗಾಗಿ ಜವಾಬ್ದಾರಿ ನಕ್ಷೆ
* ತಳಮಟ್ಟದಿಂದ ಅಭಿವೃದ್ಧಿ ಪರಿಕಲ್ಪನೆಯಾಧಾರಿತವಾಗಿ ಗ್ರಾಮದ ಯೋಜನೆಗಳು

**13. ಗ್ರಾಮದ ಅಗತ್ಯತೆಗಳಿಗೆ ಸೂಕ್ತವಾಗುವಂತೆ** ಜಿಲ್ಲಾ ಯೋಜನಾ ಸಮಿತಿ ಮತ್ತು ರಾಜ್ಯ ಯೋಜನಾ ಸಮಿತಿಯಿಂದ ಈ **ಯೋಜನೆಗಳ ಅನುಷ್ಠಾನ**
* ಯೋಜನೆ ತಯಾರಿಕೆಯ ಹಂತಗಳು:

> ಭಾಗವಹಿಸುವಿಕೆಯ ಗ್ರಾಮೀಣ ಪರಾಮರ್ಶೆ (ಅಪ್ರೇಸಲ್)
> ಅಗತ್ಯತೆಗಳಿಗನುಗುಣವಾಗಿ ವಾರ್ಷಿಕ ಯೋಜನೆ
> ಯೋಜನೆಗಳ ಆದ್ಯತೆ ಗುರುತಿಸಲು ಆದ್ಯತಾ ಶ್ರೇಣೀಕರಣ ವಿಧಾನದ ಅನುಸರಣೆ

**14. ತ್ರಿಸ್ತರ ಪಂಚಾಯತ್ ಯೋಜನೆಗಳು**
* ಪಂಚಾಯತ್‌ಗಳಿಗಾಗಿ ವಿಕೇಂದ್ರೀಕಣ ಯೋಜನೆ:

> ಸುರಕ್ಷಿತವಲ್ಲದ ವರ್ಗಗಳ ಹಿತಾಸಕ್ತಿಗೆ ಒತ್ತು
> ಎಲ್ಲಾ ವರ್ಗಗಳ ಜನರ ಅಗತ್ಯತೆಗಳನ್ನು ನಿರ್ಧರಿಸಿ ಅಭಿವೃದ್ಧಿ ಯೋಜನೆ
> ಆದ್ಯತೆ ನಿಗದಿಪಡಿಸಿ ತಳಮಟ್ಟದಿಂದ ಅಭಿವೃದ್ಧಿಯಾಗುವಂತೆ ಯೋಜನೆ ರೂಪಿಸುವಿಕೆ

* ಅಭಿವೃದ್ಧಿ ಯೋಜನೆಯ ತಯಾರಿ:

> ಗ್ರಾಮಸಭೆಯಲ್ಲಿ ಅಭಿವೃದ್ಧಿ ಯೋಜನೆಗಳ ತಯಾರಿ ಮತ್ತು ಒಪ್ಪಿಗೆ
> ಗ್ರಾಮ ಪಂಚಾಯತ್‌ನಲ್ಲಿ ಕ್ರೋಢೀಕರಣ,
> ಗ್ರಾಮೀಣ ಮಟ್ಟದಿಂದ ರಾಜ್ಯಮಟ್ಟದವರೆಗಿನ ಅವಶ್ಯಕತೆಗಳ ಈಡೇರಿಕೆಗೆ ಯೋಜನೆಗಳು - ತಾಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗಳು ಮತ್ತು ಜಿಲ್ಲಾ ಯೋಜನಾ ಸಮಿತಿಗಳ ಮೂಲಕ

**15. ಹಣಕಾಸು**
* ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಪಂಚಾಯತ್‌ಗಳಿಗೆ ಹಣಕಾಸಿನ ಹಂಚಿಕೆ, ಶೇಕಡಾ ಇಪ್ಪತ್ತಕ್ಕೆ ಕಡಿಮೆಯಿಲ್ಲದಂತೆ ಮುಕ್ತ ನಿಧಿ
* 6 ತಿಂಗಳೊಳಗೆ ರಾಜ್ಯ ಹಣಕಾಸು ಆಯೋಗದ ವರದಿಯ ಮಂಡನೆ
* ಏಪ್ರಿಲ್ ಮತ್ತು ಅಕ್ಟೋಬರ್‌ನಲ್ಲಿ ಹಣಕಾಸಿನ ಸಭೆಗಳು
* ಪಂಚಾಯತ್‌ನ ಎಲ್ಲಾ ಕಾರ್ಯಕ್ರಮಗಳ ಜಮಾಬಂಧಿ ಗ್ರಾಮ ಸಭೆಯ ಮುಂದೆ

**16. ತೆರಿಗೆ ಹೆಚ್ಚಳ**
* ಸ್ವತ್ತಿನ ಬಂಡವಾಳ ಮೌಲ್ಯದ ಆಧಾರದಲ್ಲಿ ತೆರಿಗೆಗಳ ದರ
* ತೆರಿಗೆಗಳು ಮತ್ತು ದರಗಳ ಪರಿಷ್ಕರಣೆ

> ಕಟ್ಟಡಗಳು ಮತ್ತು ಭೂಮಿಯ ಸಂಬಂಧದಲ್ಲಿ ಕನಿಷ್ಟ ಎರಡು ವರ್ಷಗಳಿಗೊಮ್ಮೆ
> IVನೇ ಅನುಸೂಚಿಯಲ್ಲಿರುವ ಬಾಬ್ತಿನ ಮೇಲೆ ವರ್ಷದಲ್ಲಿ ಕನಿಷ್ಟ ಒಮ್ಮೆ

* ಪಂಚಾಯತ್ ತೆರಿಗೆಗಳು ಮತ್ತು ಇತರ ಬಾಕಿಗಳ ವಸೂಲಿ ಪಂಚಾಯತ್‌ನ ಪ್ರಥಮ ಹೊಣೆಗಾರಿಕೆ
* ವಿಶೇಷ ಘಟಕ ಯೋಜನೆ ಮತ್ತು ಬುಡಕಟ್ಟುಗಳ ಉಪಯೋಜನೆಯೆಡೆಗಿನ ಅನುದಾನಗಳ ಹಂಚಿಕೆಗೆ ಆ ಪಂಚಾಯತ್‌ನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ಜನಗಣತಿ ಆಧಾರ.

**17. ಪಂಚಾಯತ್ ಆಸ್ತಿಗಳು ಮತ್ತು ಹಣಕಾಸು**
* ಪಂಚಾಯತ್‌ಗಳ ಸ್ವತ್ತುಗಳ ಸೃಜನೆ, ದಾರಣ, ವಿಲೇ ಪಂಚಾಯತ್‌ನ ಅಧಿಕಾರ
* ಗುತ್ತಿಗೆ ಅಥವಾ ಬಾಡಿಗೆಯ ಮೂಲಕ ಸ್ವತ್ತುಗಳ ವರ್ಗಾವಣೆಯ 25% ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಮೀಸಲು

**18. ಕುಂದುಕೊರತೆ ನಿವಾರಣಾ ಪ್ರಾಧಿಕಾರ.**
* ಸೂಕ್ತ ಸಮಯದಲ್ಲಿ ಮತ್ತು ಪರಿಣಾಮಕಾರಿಯಾಗಿ ಕುಂದುಕೊರತೆಗಳ ನಿವಾರಣೆಗಾಗಿ ಪ್ರಾಧಿಕಾರ

> ಅಧಿಕಾರ ಮತ್ತು ಕರ್ತವ್ಯಗಳು,
> ಅಪೀಲು ವಿಧಾನಗಳು,
> ಕಛೇರಿಯ ಪಧಾವಧಿ (ಅಧಿಕಾರಾವಧಿ),
> ರಾಜೀನಾಮೆ ಮತ್ತು ತೆಗೆದು ಹಾಕುವುದು,
> ಪ್ರಕ್ರಿಯೆ ಮತ್ತು ವಿಧಾನಗಳು,
> ಬಾಕಿ ಪ್ರಕರಣಗಳ ವರ್ಗಾವಣೆ,
> ಕೈಗೊಂಡ ಕ್ರಮದ ವರದಿ

**19. ಅಪರಾಧಗಳಿಗಾಗಿ ದಂಡನೆ ಮತ್ತು ರಾಜಿ ಮಾಡಿಕೊಳ್ಳಲು ಅಧಿಕಾರ**
* 64ನೇ ಪ್ರಕರಣದಲ್ಲಿ ವಿಧಿಸಿದ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿ ಮಾಡಿದ ಕಟ್ಟಡ ನಿರ್ಮಾಣ, ಬದಲಾವಣೆ, ಅದಕ್ಕೆ ಸೇರ್ಪಡೆ ಅಥವಾ ಪುನರ್‌ನಿರ್ಮಾಣ
* 66, 67, 68 ಅಥವಾ 69ನೇ ಪ್ರಕರಣಗಳಲ್ಲಿ ಅಗತ್ಯಪಡಿಸಿದ, ಪರವಾನಿಗೆ ಅಥವಾ ಲೈಸೆನ್ಸಿಲ್ಲದೆ ಅಥವಾ ಷರತ್ತುಗಳನ್ನು ಉಲ್ಲಂಘಿಸಿ ಅಥವಾ ಲೈಸೆನ್ಸನ್ನು ಅಮಾನತುಗೊಳಿಸಿದ ಕಾಲದಲ್ಲಿ, ಯಾವುದೇ ಸ್ಥಳವನ್ನು ಉಪಯೋಗಿಸಿದರೆ
* ಅಧಿನಿಯಮದ ಇತರ ಯಾವುದೇ ನಿಯಮವನ್ನು ಉಲ್ಲಂಘಿಸಿದರೆ
* ಮುಚ್ಚಬೇಕೆಂದು ಆದೇಶವನ್ನು ಮಾಡಿದ ತರುವಾಯ, ಆ ಸ್ಥಳವನ್ನು ಉಪಯೋಗಿಸಲು ಅಥವಾ ಅಂಥ ಉಪಯೋಗವನ್ನು ಅನುಮತಿಸುವುದನ್ನು ಅವನು ಮುಂದುವರೆಸಿದರೆ
* ಗ್ರಾ.ಪಂ, ತಾ.ಪಂ. ಅಥವಾ ಜಿ.ಪಂ.ಯು ಅಧಿಕೃತಗೊಳಿಸಬಹುದಾದಂತಹ ಅಧಿಕಾರಿಯು, ಸಂದರ್ಭಾನುಸಾರ ಗ್ರಾ.ಪಂ, ತಾ.ಪಂ. ಅಥವಾ ಜಿ.ಪಂ. ಅಥವಾ ಅಧಿಕಾರಿಯ ಅಭಿಪ್ರಾಯದಲ್ಲಿ ರಾಜಿ ಮತ್ತು ದಂಡದ ಜುಲ್ಮಾನೆ

**20. ಚುನಾವಣೆ ಕಾಲದಲ್ಲಿ ಭ್ರಷ್ಟಾಚಾರಗಳನ್ನು ತಡೆಗೆ ಕ್ರಮ**
* ಪ್ರತಿಯೊಂದು ಮತಗಟ್ಟೆಯಲ್ಲಿ ಚುನಾವಣಾ ಪ್ರಕ್ರಿಯೆಗಳ ವಿಡಿಯೋ-ಗ್ರಾಫಿಕ್ ಚಿತ್ರೀಕರಣ
* ಯಾವ ಪಂಚಾಯತ್ ಪ್ರದೇಶದಲ್ಲಿ ನೀತಿ ಸಂಹಿತೆಯು ಜಾರಿಯಲ್ಲಿರುತ್ತದೋ ಆ ಪಂಚಾಯತ್ ಪ್ರದೇಶದ ಒಳಗೆ ನೀತಿ ಸಂಹಿತೆಯು ಜಾರಿಯಲ್ಲಿರುವ ಇಡೀ ಅವಧಿವರೆಗೆ ಎಲ್ಲ ಮದ್ಯದ ಅಂಗಡಿಗಳನ್ನು ಹಾಗೂ ಮದ್ಯ ತಯಾರಿಕಾ ಘಟಕಗಳನ್ನು ಮುಚ್ಚತಕ್ಕದ್ದು.
* ಇಂತಹ ಘಟಕಗಳಿಗೆ ಮೊಹರು ಮಾಡಿ ಕೀಲಿಕೈಯನ್ನು ಜಿಲ್ಲಾಧಿಕಾರಿಗಳಿಗೆ ಅಥವಾ ಅಧಿಕಾರ ವ್ಯಾಪ್ತಿಯುಳ್ಳ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ರವರಿಗೆ
* ನೀತಿ ಸಂಹಿತೆ ಜಾರಿಯಲ್ಲಿರುವ ಅವಧಿಯಲ್ಲಿ ಮಾಡುವ ಯಾವುದೇ ಉಲ್ಲಂಘನೆಗಳು ಸಂಜ್ಞೇಯ ಮತ್ತು ಜಾಮೀನುರಹಿತ ಅಪರಾಧಗಳು
* ತತ್ಕಾಲದಲ್ಲಿ ಜಾರಿಯಲ್ಲಿರುವ ಸುಸಂಗತ ಕಾನೂನಿನ ಮೇರೆಗೆ ಜುಲ್ಮಾನೆಯ ಮತ್ತು ಕಾರಾವಾಸ ಶಿಕ್ಷೆಯ ದಂಡನೆ

**21. ಜ್ಞಾನ ನಿರ್ವಹಣೆ**
* ಪಿ.ಆರ್.ಎ
* ದತ್ತಾಂಶ ಸಂಗ್ರಹ ಮತ್ತು ಕ್ರೋಢೀಕರಣ
* ಕ್ರೋಢೀಕೃತ ದತ್ತಾಂಶಗಳ ನಿರ್ವಹಣೆ
* ಸ್ವಾಭಾವಿಕ ಮತ್ತು ಸಂಪನ್ಮೂಲಗಳು ಮತ್ತು ಆಸ್ತಿಗಳ ಮ್ಯಾಪಿಂಗ್ (ಗುರುತು ಹಾಕುವಿಕೆ)
* ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಗಳ ದಾಖಲಾತಿ
* ಮಾನವ ಅಭಿವೃದ್ಧಿ ಸೂಚ್ಯಂಕ
* ಜಾಗೃತಿ ಮೂಡಿಸುವುದು

**22. ಪಟ್ಟಣ ಮತ್ತು ನಗರ ಯೋಜನೆ**
* ಗ್ರಾಮ ಪಂಚಾಯತ್‌ಗಳು ಕಟ್ಟಡದ ಪರವಾನಿಗೆ ಅಥವಾ ವಸತಿ ಅಥವಾ ವಾಸ ಸ್ಥಳಗಳ ಲೇಔಟ್‌ಗಳ ಅನುಮೋದನೆಗಳಿಗೆ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ ಉಪಬಂಧಗಳ ಕಡ್ಡಾಯ ಪಾಲನೆ.
* ಯಾವುದೇ ಅನುಮೋದನೆಯು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ ಉಪಬಂಧಗಳ ಯಾವುದೇ ಉಲ್ಲಂಘನೆಯು "ದುರ್ನಡತೆ"ಯೆಂದು ಅರ್ಥೈಸತಕ್ಕದ್ದು ಮತ್ತು ಅದಕ್ಕಾಗಿ ಸಂಬಂಧಪಟ್ಟ ಅಧಿಕಾರಿ ಅಥವಾ ಸಿಬ್ಬಂದಿಯು ಶಿಸ್ತುಕ್ರಮಕ್ಕೆ ಹೊಣೆಗಾರನಾಗಿರತಕ್ಕದ್ದು."

**23. ಪಂಚಾಯತ್ ರಾಜ್ ಆಯುಕ್ತರ ನಿರ್ದೇಶನಾಲಯ ಮತ್ತು ಕರ್ನಾಟಕ ಪಂಚಾಯತ್ ರಾಜ್ ಆಡಳಿತ ಸೇವೆ**
* ಪಂಚಾಯತ್ ರಾಜ್ ಸಂಸ್ಥೆಗಳ ಸುಗಮ ಕಾರ್ಯನಿರ್ವಹಣೆಗೆ ಪೂರಕವಾಗಿ ಪ್ರತ್ಯೇಕ ಪಂಚಾಯತ್ ರಾಜ್ ಆಯುಕ್ತರ ನಿರ್ದೇಶನಾಲಯ ಸ್ಥಾಪನೆ.
* ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಸಂಬಂಧಿತ ಹುದ್ದೆಗಳ ಪ್ರವರ್ಗವನ್ನು ಒಳಗೊಂಡ ಕರ್ನಾಟಕ ಪಂಚಾಯತ್‌ರಾಜ್ ಆಡಳಿತಾತ್ಮಕ ಸೇವೆಯ ರಚನೆ

**24. ರಾಜ್ಯ ಪಂಚಾಯತಿ ಪರಿಷತ್**
* ಪಂಚಾಯತ್ ರಾಜ್ ವ್ಯವಸ್ಥೆಯ ಸುಧಾರಣೆಗೆ,
* ಈ ವ್ಯವಸ್ಥೆಯು ಜನತೆಯ ಅವಶ್ಯಕತೆಗಳಿಗೆ ತೀವ್ರವಾಗಿ ಸ್ಪಂದಿಸುವಂತೆ ಮಾಡಲು,
* ಚುನಾಯಿತ ಪ್ರತಿನಿಧಿಗಳು ತಮ್ಮ ಆಶಯಗಳನ್ನು ವ್ಯಕ್ತಪಡಿಸಲು ಮತ್ತು ತಮ್ಮ ಸಲಹೆಗಳನ್ನು ಸೂಚಿಸಲು
* ಒಂದು ವೇದಿಕೆಯಾಗಿ ರಾಜ್ಯ ಪಂಚಾಯತ್ ಪರಿಷತ್ ರಚನೆ

**25. ಅನುಸೂಚಿ IV - ಆಸ್ತಿಯ (ಸ್ವತ್ತಿನ) ಮೇಲಿನ ತೆರಿಗೆ**
* ಕಟ್ಟಡಗಳ ಮೇಲಿನ ತೆರಿಗೆ
* ಖಾಲಿ ಜಾಗದ ಮೇಲಿನ ತೆರಿಗೆ
* ಜಾಹೀರಾತು ಅಥವಾ ಜಾಹೀರಾತು ಪ್ರಕಟಣಾ ಫಲಕಗಳ ಮೇಲೆ ತೆರಿಗೆ
* ಮೊಬೈಲ್ ಟವರ್‌ಗಳ ಮೇಲಿನ ತೆರಿಗೆ
* ಗಾಳಿ ಶಕ್ತಿಯಿಂದ ನಡೆಯುವ ಬೀಸುಯಂತ್ರದ (wind mill) ಮೇಲೆ ತೆರಿಗೆ
* ಸೌರಶಕ್ತಿ ಘಟಕದ (solar park) ಮೇಲೆ ತೆರಿಗೆ
* ಮನರಂಜನಾ ತೆರಿಗೆಗಳು
* ವಾಹನ (ನಿಲುಗಡೆ) ತೆರಿಗೆ
* ಮಾರುಕಟ್ಟೆಗಳ ಮೇಲಿನ ಫೀಜು
* ಜಾನುವಾರುಗಳ ನೋಂದಣಿಗೆ ಫೀಜು

•• •• •• ••

# ಮಕ್ಕಳು ಇಂದೇ ಪ್ರಜೆಗಳು ಸಾರಿ ಹೇಳಿದ ಗ್ರಾಮ ಸ್ವರಾಜ್ ಕಾಯಿದೆ



**ಕವಿತ ರತ್ನ**
ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ನಿರ್ದೇಶಕರು ಹಾಗೂ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ ಕಾರ್ಯಕರ್ತರು

2015ರಲ್ಲಿ ಮೈಸೂರಿನ ದೊಡ್ಡ ಸಭಾಂಗಣದಲ್ಲಿ ಆಗ ಜಾರಿಯಲ್ಲಿದ್ದ ಪಂಚಾಯತ್ ರಾಜ್ ಕಾಯಿದೆಯ ತಿದ್ದುಪಡಿಗೆ ಸಂಬಂಧಿಸಿದ ಸಮಾಲೋಚನಾ ಸಭೆಯೊಂದು ನಡೆಯುತ್ತಿತ್ತು. ಆ ಸಭೆಯಲ್ಲಿ ನೆರೆದಿದ್ದ ಸುಮಾರು 250 ಜನಪ್ರತಿನಿಧಿಗಳಿಂದ ಒಕ್ಕೊರಲಿನಿಂದ ಬಂದಂತಹ ಶಿಫಾರಸುಗಳಲ್ಲೊಂದು - 'ಮಕ್ಕಳ ವಿಶೇಷ ಗ್ರಾಮಸಭೆಗಳು ಮತ್ತು ಮಹಿಳಾ ವಿಶೇಷ ಗ್ರಾಮಸಭೆಗಳು ಜಾರಿಗೆ ಬರಬೇಕು' ಎನ್ನುವುದು. ಮೈನವಿರೇಳಿಸುವ ಕ್ಷಣಗಳು ಅವು.

2002ರಲ್ಲಿ, ನಮ್ಮ ಸಂಸ್ಥೆಯಾದ 'ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್' ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕೆರಾಡಿ ಗ್ರಾಮ ಪಂಚಾಯತ್‌ನಲ್ಲಿ ಮೊಟ್ಟ ಮೊದಲ ಬಾರಿಗೆ ಸಂಯೋಜಿಸಿದ ಮಕ್ಕಳ ಗ್ರಾಮ ಸಭೆಯ ಆಲೋಚನೆಗೆ ರಾಜ್ಯಮಟ್ಟದಲ್ಲಿ ಚಾಲನೆ ಸಿಕ್ಕಿದ್ದು ಮಾತ್ರವಲ್ಲ, ತಿದ್ದುಪಡಿಯ ಪ್ರಕ್ರಿಯೆಯ ಭಾಗವಾದ ಪ್ರದೇಶವಾರು ಸಮಾಲೋಚನೆಗಳಲ್ಲೆಲ್ಲಾ ಒಂದು ಶಿಫಾರಸ್ಸಾಗಿ ಹೊರಹೊಮ್ಮಿದ್ದು ಅತ್ಯಂತ ಹೆಮ್ಮೆ ಉಂಟು ಮಾಡಿತ್ತು. 2016ರಲ್ಲಿ ತಿದ್ದುಪಡಿ ಸಮಿತಿಯ ಶಿಫಾರಸ್ಸುಗಳ ಆಧಾರದ ಮೇಲೆ ಗ್ರಾಮ ಸ್ವರಾಜ್ ಕಾಯಿದೆ ರೂಪಿತವಾಗಿ ಜಾರಿಯಾದಾಗ ಮಕ್ಕಳ ಗ್ರಾಮ ಸಭೆಗಳು ಕಾನೂನು ಬದ್ಧವಾಗಿ ಕಾಯ್ದೆಯಲ್ಲಿ ಅಡಕವಾಗಿದ್ದು ನಮ್ಮ ದೇಶದ ಮಕ್ಕಳ ಹಕ್ಕುಗಳ ಚರಿತ್ರೆಯಲ್ಲೇ ಒಂದು ದೊಡ್ಡ ಮೈಲಿಗಲ್ಲು. ಇಂತಹ ಮೈಲಿಗಲ್ಲಿಗೆ ನೆಲಗಟ್ಟು ಹಾಕಿದ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಿದವರು ಕುಂದಾಪುರ ತಾಲೂಕಿನ ಕೆರಾಡಿ ಗ್ರಾಮ ಪಂಚಾಯತ್ ಮತ್ತು ಅಲ್ಲಿನ ಮಕ್ಕಳು ಎಂಬುದು ಅತ್ಯಂತ ಪ್ರೌಢಿಮೆಯ ಸಂಗತಿ. ಪಂಚಾಯತ್ ಒಂದು ಅದರ ವ್ಯಾಪ್ತಿಗೆ ಬರುವ ಮಕ್ಕಳನ್ನೂ ಒಳಗೊಂಡಂತಹ ಗ್ರಾಮಸಭೆಯ ಸದಸ್ಯರೊಂದಿಗೆ ದೃಢ ಮನಸ್ಸಿನಿಂದ ಸಕಾರಾತ್ಮಕ ಬದಲಾವಣೆಯತ್ತ ಹೆಜ್ಜೆ ಇಟ್ಟರೆ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಇದು ಕೈಗನ್ನಡಿಯಾಗಿದೆ.

ಮಕ್ಕಳ ಭಾಗವಹಿಸುವಿಕೆಯನ್ನು ಎತ್ತಿಹಿಡಿಯುವಲ್ಲಿ ನೀಡಿದ ಕೊಡುಗೆಗಾಗಿ ನೋಬೆಲ್ ಶಾಂತಿ ಪುರಸ್ಕಾರಕ್ಕೆ ನಾಮನಿರ್ದೇಶಿತಗೊಂಡ ನಮ್ಮ ಸಂಸ್ಥೆ ಮೂರು ದಶಕಕ್ಕೂ ಹೆಚ್ಚು ಕಾಲಗಳಿಂದ ಮಕ್ಕಳ ಪೌರತ್ವ ಎತ್ತಿ ಹಿಡಿಯುತ್ತಾ ಬಂದಿದೆ.

'ಮಕ್ಕಳು ಇಂದೇ ಪ್ರಜೆಗಳು' ಎನ್ನುವ ಪರಿಕಲ್ಪನೆಯ ತಳಹದಿಯ ಮೇಲೆ ಸಂಸ್ಥೆ ದುಡಿಯುವ ಮಕ್ಕಳ ಸಂಘಟನೆಯಾದ ಭೀಮಾಸಂಘದ ಸಹಭಾಗಿತ್ವದೊಂದಿಗೆ ಜಾರಿಗೊಳಿಸಿದ ಮಕ್ಕಳ ಗ್ರಾಮ ಸಭೆಗಳು ಕುಂದಾಪುರ ತಾಲೂಕಿನಲ್ಲಿ ಹೊಸ ಅಲೆಯೊಂದನ್ನು ಎಬ್ಬಿಸಿತ್ತು. 2005ರ ಆಸುಪಾಸಿಗೆ ಕುಂದಾಪುರ ತಾಲೂಕಿನ 56 ಗ್ರಾಮ ಪಂಚಾಯತ್‌ಗಳಲ್ಲಿ ಆಚರಣೆಗೆ ಬಂದ ಮಕ್ಕಳ ಗ್ರಾಮ ಸಭೆಗಳು, 2006ರಲ್ಲಿ ಸರಕಾರಿ ಸುತ್ತೋಲೆಯ ಮುಖಾಂತರ ಕರ್ನಾಟಕದ ಆಗಿರುವ 5629 ಪಂಚಾಯತ್‌ಗಳನ್ನು ತಲುಪಿದ್ದು ಮತ್ತೊಂದು ವಿಶೇಷ ತಿರುವು. ಇದಕ್ಕಾಗಿ ಸರಕಾರದ ಜೊತೆಯಲ್ಲಿ ನಡೆಸಿದ ನಮ್ಮ ವಕೀಲಿ ಅತ್ಯಂತ ಫಲಪ್ರದವಾಗಿ 2007ರ ಸರಕಾರದ ವಿಸ್ತರಣಾ ಸುತ್ತೋಲೆಯಲ್ಲಿ ಮಕ್ಕಳ ಹಕ್ಕುಗಳಿಗೆ, ಮಕ್ಕಳ ಭಾಗವಹಿಸುವಿಕೆಗೆ ಮತ್ತು ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ಅತ್ಯಂತ ಸಂವೇದನಾಶೀಲ ಪ್ರಕ್ರಿಯೆಗಳು ಅಡಕವಾಗಿದ್ದವು. ಅಂದಿನಿಂದ 2016ರವರೆಗೆ ವರ್ಷವಾರು ಇದರದ್ದೇ ಮರು-ಸುತ್ತೋಲೆಯ ಮುಖಾಂತರವೇ ಮಕ್ಕಳ ಗ್ರಾಮಸಭೆಯ ಆಚರಣೆ ನಡೆಸುತ್ತಾ ಬಂದಿತ್ತು. ಹಲವೆಡೆ ಅರ್ಥಪೂರ್ಣವಾಗಿ, ಕೆಲವೆಡೆ ನಾಮಕಾವಾಸ್ತೆಗೆ ಇವು ನಡೆಯುತ್ತಾ ಬಂದರೂ, ಮಕ್ಕಳ ಗ್ರಾಮ ಸಭೆಗಳಲ್ಲಿ ಮಕ್ಕಳು ತಮ್ಮ ಸಮಸ್ಯೆಗಳನ್ನು ಎತ್ತಿ ಹಿಡಿದು, ದೊಡ್ಡವರು ಮೂಗಿನ ಮೇಲೆ ಬೆರಳಿರಿಸುವಂತೆ ಮಾಡಿದ್ದಲ್ಲದೇ, ತಾವು ಎತ್ತಿದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ತಮ್ಮ ಸ್ಥಳೀಯ ಸರ್ಕಾರದ ಬದ್ಧತೆಯನ್ನು ಪಡೆದುಕೊಂಡ ಉದಾಹರಣೆಗಳು ಹೇರಳವಾಗಿದೆ.

ನಮ್ಮ ದೇಶದ ಮಕ್ಕಳ ನೀತಿ, 2013 ಮತ್ತು ನಾವು ದೇಶವಾಗಿ ಬದ್ಧತೆ ಹೊಂದಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಗಳಲ್ಲಿ, ಮಕ್ಕಳ ಭಾಗವಹಿಸುವ ಹಕ್ಕಿಗೆ ನೀಡಿರುವ ಪ್ರಾಧಾನ್ಯತೆಗೆ ಮಕ್ಕಳ ಗ್ರಾಮಸಭೆಗಳು ಪ್ರಜಾಪ್ರಭುತ್ವದ ಆಚರಣೆಯಲ್ಲಿ ತಳಹದಿಯಾಗಿದ್ದು, ಪ್ರಪಂಚಕ್ಕೇ ಮಾದರಿಯಾಗಿದೆ. ಇತ್ತೀಚೆಗೆ ಜಾರಿಗೆ ಬಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ ಮಕ್ಕಳ ಹಕ್ಕುಗಳಿಗೆ ಹಲವಾರು ರೀತಿಯಲ್ಲಿ ಒತ್ತುಕೊಟ್ಟಿದೆ. ಗ್ರಾಮ ಪಂಚಾಯತ್‌ಗಳಿಗೆ ತಮ್ಮ ಸಮಾಜದ ಬದಿಗೊತ್ತಲ್ಪಟ್ಟ/ಅಸುರಕ್ಷಿತ ವರ್ಗದವರ ಒಳಿತಿಗಾಗಿ ವಿಶೇಷ ಗಮನ ನೀಡಬೇಕು ಎಂದು ಅತ್ಯಂತ ಗಂಭೀರತೆಯಿಂದ ಸೂಚಿಸಿ, ಮಕ್ಕಳು ಮತ್ತು ಹದಿಹರೆಯದವರನ್ನು ಬದಿಗೊತ್ತಲ್ಪಟ್ಟ/ಅಸುರಕ್ಷಿತ ವರ್ಗದವರು ಯಾರೆಂಬ ವ್ಯಾಖ್ಯಾನದಲ್ಲಿ ಗುರುತಿಸಿದೆ. ಗ್ರಾಮ ಸಭೆಯಲ್ಲಿ ನಡೆಯುವ ಯಾವುದೇ ಚಟುವಟಿಕೆಯಾಗಲೀ, ಮಹಿಳೆಯರು ಮತ್ತು ಮಕ್ಕಳ ಹಕ್ಕುಗಳಿಗಾಗಲೀ, ಗೌರವಕ್ಕಾಗಲೀ, ಸ್ವಾತಂತ್ರ್ಯಕ್ಕಾಗಲೀ ಧಕ್ಕೆ ಉಂಟು ಮಾಡುವಂತಿಲ್ಲ ಎಂದು ಸ್ಪಷ್ಟವಾಗಿ ಈ ಕಾಯಿದೆ ಹೇಳುತ್ತದೆ. ತಮ್ಮ ಜೀವನಕ್ಕೆ ಸಂಬಂಧಿಸಿದ ಮತ್ತು ತಮ್ಮ ಸಶಕ್ತತೆಗೆ ಸಂಬಂಧಿಸಿದ ಯೋಜನೆಗಳು ಹಾಗೂ ಕಾರ್ಯಕ್ರಮಗಳ ರೂಪುರೇಷೆಗಳನ್ನು ತೀರ್ಮಾನಿಸುವಲ್ಲಿ ಮಕ್ಕಳ ನೇರ ಭಾಗವಹಿಸುವಿಕೆಗಾಗಿ ಕನಿಷ್ಟ ವರ್ಷಕ್ಕೆ ಒಂದು ಬಾರಿಯಾದರೂ ಮಕ್ಕಳ ಗ್ರಾಮಸಭೆಗಳು ನಡೆಯಬೇಕು ಎಂದು ತಿಳಿಸಿದೆ. ಮಕ್ಕಳ ಶಿಕ್ಷಣ, ಅವರ ಆರೋಗ್ಯದ ರಕ್ಷಣೆ, ಅವರಿಗೆ ಬೇಕಾದ ಸಕಲ ಸೌಲಭ್ಯಗಳು ಅದರಲ್ಲೂ ಹೆಣ್ಣು ಮಕ್ಕಳಿಗೆ ಹೆಚ್ಚಿನ ಗಮನ ನೀಡಲು ಪಂಚಾಯತ್‌ಗಳ ಸಾಮಾಜಿಕ ನ್ಯಾಯ ಸಮಿತಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ವಿಶೇಷವಾಗಿ ಉಲ್ಲೇಖಿಸಲಾಗಿದೆ.

ಅಂಗವಿಕಲತೆ ಇರುವ ಮಕ್ಕಳು, ಮಾನಸಿಕವಾಗಿ, ದೈಹಿಕವಾಗಿ ವಿಶೇಷ ಅಗತ್ಯವಿರುವ ಮಕ್ಕಳು, ವಲಸೆ ಕುಟುಂಬಗಳ ಮಕ್ಕಳು, ಬಾಲ್ಯವಿವಾಹಕ್ಕೆ ಅಥವಾ ಜೀತಪದ್ಧತಿಗೆ ಒಳಗಾಗಿರುವ ಮಕ್ಕಳು ಇವರೆಲ್ಲರಿಗೆ ಸ್ಪಂದಿಸುವ ಬಗ್ಗೆ ಈ ಕಾಯಿದೆಯಲ್ಲಿ ವಿಶೇಷ ಉಲ್ಲೇಖಗಳಿವೆ. ಮಕ್ಕಳಿಗೆ ಸಮಸ್ಯೆಗಳು ಬಂದಾಗ ಸ್ಪಂದಿಸುವುದು ಮಾತ್ರವಲ್ಲ, ಅವು ಬಾರದ ರೀತಿಯಲ್ಲಿ ತಡೆಗಟ್ಟುವ ಸಲುವಾಗಿ ಗ್ರಾಮ ಪಂಚಾಯತ್ ಕೈಗೊಳ್ಳಬೇಕಾದ ಅನೇಕ ಪ್ರಕ್ರಿಯೆಗಳನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ಮಕ್ಕಳಿಗೆ ನೇರವಾಗಿ ಹಾಗೂ ಪರೋಕ್ಷವಾಗಿ ಪರಿಣಾಮ ಬೀರುವ ಪಂಚಾಯತ್‌ನ ಸಮಗ್ರ ಬೆಳವಣಿಗೆಗೆ ಸಂಬಂಧಿಸಿದ ಅನೇಕ ಅಂಶಗಳನ್ನು

IIನೇ ಪುಟಕ್ಕೆ..............